ಪ್ರಸ್ತಾವವನ್ನು ಮಂಡಿಸಲಾಯಿತು.

ಉಪಾಧ್ಯಕ್ಷಿಣಿಯವರು:– ವಿಧೇಯಕದ 4ನೇ ಖಂಡಕ್ಕೆ ಮಂಡಿಸಿರುವ ತಿದ್ದುಪಡಿಯನ್ನು ಅಂಗೀಕರಿಸುವುದು. ಪ್ರಸ್ತಾವ ಏನೆಂದರೆ,

"That the provisions of section 4 shall come into force at once and the rest of the provisions shall be deemed to have come into force on the 14th day of May 1992".

ಪ್ರಸ್ತಾವಕ್ಕೆ ಅನುಮೋದನೆ ದೊರಕಿತು. ಖಂಡ–4, ತಿದ್ದುಪಡಿಯಾದಂತೆ ಅಂಗೀಕರಿಸಲ್ಪಟ್ಟಿತು.

ಖಂಡ 1 ಇತ್ಯಾದಿ:

ಉಪಾಧ್ಯಕ್ಷಿಣಿಯವರು:– ಪ್ರಸ್ತಾವ ಏನೆಂದರೆ "ಮೊದಲನೆ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

1992ನೇ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು :– ಪ್ರಸ್ತಾವ ಏನೆಂದರೆ, "1992ನೇ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ :– ಮಾನ್ಯ ಉಪಾಧ್ಯಕ್ಷಿಣಿಯವರು ಒಪ್ಪಿಗೆ ಕೊಟ್ಟರೆ, ಸಭೆಯು ಒಪ್ಪಿಗೆ ಕೊಟ್ಟರೆ, ಕೋರ್ಟ್ ಫೀ ಸ್ಟಾಂಪ್ .... ವಿಧೇಯಕವನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಚ್. ಬನ್ನಿಕೋಡ್:– ಕೋರ್ಟ್ ಫೀ ಬಗ್ಗೆ ವಿಧೇಯಕವನ್ನು ತಂದಿದ್ದಾರೆ. ಅದರಲ್ಲಿ ರಾಜ್ಯದ ಬೊಕ್ಕಸಕ್ಕೆ ಹಣಕಾಸಿನ ಖರ್ಚು ಏನು ಬರುತ್ತದೆ, ಅದರಿಂದ ಆಗುವ ಆಗು ಹೋಗುಗಳು ಏನು ? ಜನರ ಮೇಲೆ ಯಾವ ರೀತಿಯಲ್ಲಿ, ಎಷ್ಟು ಭಾರ ಬೀಳುತ್ತದೆ ? ಮುಂತಾದ ವಿಚಾರಗಳ ಬಗ್ಗೆ ಮಾನ್ಯ ಸಚಿವರು ವಿವರಣೆಯನ್ನು ಕೊಡಬೇಕು.